ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ತಿಪಟೂರು

ಸಿ.ಸಿ ನಂ. **1481/2023**

ಚಾಸಾಃ 1
ಫ್ರಾಸಾಃ 1

ದಿನಾಂಕಃ **04-10-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | - | ಮಂಜುನಾಥ ಹೆಚ್.ಎಸ್ |
| ತಂದೆಯ/ಗಂಡನ ಹೆಸರು | - | ಶಿವಲಿಂಗೇಗೌಡ |
| ವಯಸ್ಸು | - | 41 ವರ್ಷ |
| ಉದ್ಯೋಗ | - | ಅಬಕಾರಿ ನಿರೀಕ್ಷಕರು |
| ವಾಸ ಸ್ಥಳ | - | ತಿಪಟೂರು |

ಮುಖ್ಯ ವಿಚಾರಣೆ ಎಪಿಪಿಯವರಿಂದಃ

ದಿಃ 25-11-2023 ರಿಂದ ಇಲ್ಲಿಯವರೆಗೂ ನಾನು ಅಬಕಾರಿ ಉಪ ವಿಭಾಗ ತಿಪಟೂರಿನಲ್ಲಿ ಅಬಕಾರಿ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 01-04-2021 ರಂದು ಬೆಳಗ್ಗೆ 11 ಗಂಟೆಗೆ ವಿಧಾನಸಭಾ ಸಾರ್ವತ್ರಿಕ ಚುನಾವಣೆ 2023 ರ ನಿಮಿತ್ತ ಮಾನ್ಯ ಅಬ ಕಾರಿ ಉಪ ಆಯುಕ್ತರು ತುಮಕೂರು ರವರ ನಿರ್ದೇಶನದ ಮೇರೆಗೆ ತಿಪಟೂರು ತಾಲೂಕು ಬೋಚಿಹಳ್ಳಿ ಗೇಟ್ ಬಳಿ ರಸ್ತೆ ಕಾವಲು ನಡೆಸುತ್ತಿದ್ದಾಗ ನೊಣವಿನಕೆರೆ ಕರೆಯಿಂದ ಒಂದು ದ್ವಿಚಕ್ರ ವಾಹನ ಬಂದಾಗ ಅದನ್ನು ಕೈ ಸನ್ನೆ ಮಾಡಿ ನಿಲ್ಲಿಸಿದಾಗ ಆ ವಾಹನದ ಮೇಲ್ಗಡೆ ಒಂದು ಪ್ಲಾಸ್ಟಿಕ್ ಚೀಲ ಇರುವುದು ಕಂಡು ಬಂದಿತ್ತು ಆ ಚೀಲದ ಒಳಗಡೆ ಏನಿದೆ ಒಂದು ಪ್ರಶ್ನಿಸಿದಾಗ ಆತ ಉತ್ತರ ಹೇಳದೆ ತಡವರಿಸಿದಾಗ ನಾವು ಅನುಮಾನ ಗೊಂಡು ಪರಿಶೀಲಿಸಲು ಅಲ್ಲೇ ಇದ್ದಂತಹ ಪಂಚರನ್ನು ವಿಚಾರಿಸಿದಾಗ ಅವರು ಪಂಚರಾಗಲು ನಿರಾಕರಿಸಿದ ಕಾರಣ ಇಲಾಖಾ ಸಿಬ್ಬಂಧಿಗಳನ್ನು ಪಂಚರನ್ನಾಗಿ ಮಾಡಿಕೊಂಡು ಶೋಧನಾ ವಾರೆಂಟ್ ಪಡೆಯಲು ಸಮಯಾವಕಾಶ ಇಲ್ಲದೇ ಇರುವ ಕಾರಣ ಇಲಾಖಾ ಸಿಬ್ಬಂಧಿ ಚಾಸಾ-2 ಮತ್ತು 3 ರವರನ್ನು ಪಂಚರನ್ನಾಗಿ ಮಾಡಿಕೊಂಡು ಕಲಂ. 54 ರ ಪ್ರಕಾರ ಶೋಧನಾ ವಾರೆಂಟನ್ನು ತಯಾರಿಸಿಕೊಂಡು ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಿದಾಗ ಅದರ ಒಳಗಡೆ ಮದ್ಯ ತುಂಬಿದ 90 ಮಿಲಿಯ 165 ಡಿ ಕೆ ಫೈನ್ 9 ವಿಸ್ಕಿ ಎಂದು ನಮೂದಿಸಿರುವ ಮದ್ಯದ ಟೆಟ್ರಾ ಪ್ಯಾಕೇಟ್ ಗಳು ಇರುವುದು ಕಂಡು ಬಂದಿರುತ್ತದೆ. ನಂತರ

ಆತನ ಬಗ್ಗೆ ವಿಚಾರಿಸಿದಾಗ ಮೋಹನ್ ರಾಜ್ ಬಿನ್ ರಂಗಪ್ಪ, 47 ವರ್ಷ, ಸೂಗೂರು ಗ್ರಾಮ ನೊಣವಿನಕೆರೆ ಹೋಬಳಿ ತಿಪಟೂರುಗ ಗ್ರಾಮ ಎಂದು ತಿಳಿಸಿದ್ದು ನಾವುಗಳು ಚುನಾವಣಾ ವೇಳೆಯಲ್ಲಿ ನಿಗಧಿತ ಮಿತಿಗಿಂತ ಹೆಚ್ಚಿನ ಮದ್ಯವನ್ನು ಸಾಗಾಟ ಮಾಡಲು ಯಾವುದಾದರೂ ರಹದಾರಿ ಇದೆಯಾ ಎಂದು ಕೇಳಿದಾಗ ಇಲ್ಲ ಎಂದು ತಿಳಿಸಿರುತ್ತಾನೆ. ದ್ವಿಚಕ್ರ ವಾಹನ ನೋಡಲಾಗಿ ಹೀರೋ ಐಸ್ ಮಾರ್ಕ 110 ನೋಂದಣಿ ಸಂಖ್ಯೆ ಕೆಎ-13-ಇಎಲ್ -9543 ಆಗಿರುತ್ತದೆ. ನಂತರ ಆತನಿಗೆ ಸಾಗಾಟ ಮಾಡಲು ಕಾನೂನು ಬಾಹಿರ ಎಂದು ತಿಳಿಸಿ ಮುದ್ದೆಮಾಲು ಮತ್ತು ವಾಹನವನ್ನು ನಮ್ಮ್ನ ವಶಕ್ಕೆ ಪಡೆದುಕೊಳ್ಳಲಾಯಿತು. ದೊರೆತ ಮುದ್ದೆಮಾಲಿನಿಂದ ರಾಸಾಯನಿಕ ವಿಶ್ಲೇಷಣಾ ವರದಿಗಾಗಿ 90 ಮಿಲಿಯ 30 ಮದ್ಯ ಟೆಟ್ರಾ ಪ್ಯಾಕೇಟ್ ಗಳನ್ನು ಮಾದರಿ ತೆಗೆದು ಸ್ಥಳದಲ್ಲೇ ಮಾದರಿ ಚೀಟಿ ತಯಾರಿಸಿ ಪಂಚರ ಸಹಿಗಳನ್ನು ಪಡೆದು ಅಂಟಿಸಲಾಯಿತು. ನಂತರ ಆರೋಪಿತನಿಗೆ ಈ ತನಿಖೆಗೆ ಸಹಕರಿಸುತ್ತೇನೆ ಎಂದು ತಿಳಿಸಿದ್ದರಿಂದ ಆತನಿಗೆ ನೋಟೀಸನ್ನು ಜಾರಿ ಪಡಿಸಿ ಮಹಜರನ್ನು ಬೆಳಗ್ಗೆ 11 ರಿಂದ 12-30 ಗಂಟೆವರೆಗೂ ಬರೆಯಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ 30 ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳನ್ನು ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು -1 ಎಂದು ಗುರುತಿಸಲಾಯಿತು. ಚೆಕ್ಕುಬಂಧಿ ಪೂರ್ವಕ್ಕೆ ತುರುವೇಕೆರೆ ಟೌನ್ ಕಡೆಗೆ ಹೋಗುವ ರಸ್ತೆ, ಪಶ್ಚಿಮಕ್ಕೆ ತಿಪಟೂರು ಟೌನ್ ಕಡೆಗೆ ಹೋಗುವ ರಸ್ತೆ, ಉತ್ತರಕ್ಕೆ ತೆಂಗಿನ ತೋಟ ಮತ್ತು ದಕ್ಷಿಣಕ್ಕೆ ಬೋಚಿಹಳ್ಳಿಗೆ ಹೋಗುವ ರಸ್ತೆ. ಈ ಹಂತದಲ್ಲಿ ಸಾಕ್ಷಿಗೆ ಒಂದು ದ ದಾಖಲಾತಿ ತೋರಿದ್ದು ಅದು ದೃಢೀಕೃತ ಪಂಚನಾಮೆಯಾುಗಿರುತ್ತದೆ ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಗೆ ಮತ್ತೊಂದು ದಾಖಲಾತಿ ತೋರಿಸಿದ್ದು ಅದು ಶೋಧನಾ ಸಮುಚಿತ ಆಧಾರವಾಗಿರುತ್ತದೆ ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಗೆ ಮತ್ತೊಂದು ದಾಖಲಾತಿ ತೋರಿಸಿದ್ದು ಅದು ದೃಢೀಕೃತ ಸ್ವತ್ತಿನ ಪಟ್ಟಿಯಾಗಿರುತ್ತದೆ ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಗಿರುತ್ತದೆ. ಮತ್ತೊಂದು ದಾಖಲಾತಿ ತೋರಿಸಿದ್ದು ಅದು ಮಾದರಿ ಸೀಲಿನ ನಕಲು ಆಗಿರುತ್ತದೆ ಅದನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಗಿರುತ್ತದೆ. ಮತ್ತೊಂದು ದಾಖಲಾತಿ ತೋರಿಸಿದ್ದು ಅದು ಆರೋಪಿಗೆ ನೀಡಿದ ಕಲಂ. 41(ಎ) ಸಿಆರ್‌ಪಿಸಿ ಕೆಳಗಿನ ನೋಟೀಸ್ ಆಗಿರುತ್ತದೆ ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಗಿರುತ್ತದೆ. ನಂತರ ಮತ್ತೊಂದು ದಾಖಲಾತಿ ತೋರಿಸಿದ್ದು ಅದನ್ನು ರಾಸಾಯನಿಕ ವಿಶ್ಲೇಷಣಾ ಪರೀಕ್ಷೆಗೆ ಕಳುಹಿಸಿರುವ ವರದಿಯಾಗಿರುತ್ತದೆ ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು

ಅದನ್ನು ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಗಿರುತ್ತದೆ. ನಂತರ ಮುಂದಿನ ತನಿಖೆಗಾಗಿ ಚಾಸಾ-4 ರವರಿಗೆ ಕಡತವನ್ನು ಹಸ್ತಾಂತರಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲು- ಶ್ರೀ ಹೆಚ್ ಬಿ ವಕೀಲರಿಂದಃ

ಪ್ರಕರಣದ ದಿನದಂದು ನಾನು ಕಛೇರಿಯನ್ನು ಬೆಳಗ್ಗೆ 9-30 ಗಂಟೆಗೆ ಬಿಟ್ಟು ರಸ್ತೆ ಗಸ್ತು ಮಾಡುತ್ತಿರುವಂತಹ ಸಮಯದಲ್ಲಿ ಆರೋಪಿಯ ವಾಹನವು ಸಿಕ್ಕಿ ಅದನ್ನು ಪರಿಶೀಲಿಸಿರುತ್ತೇವೆ ಎಂದು ಹೇಳುತ್ತಾರೆ. ಆ ದಿನದಂದು ನಾವು 4 ಜನ ಸಿಬ್ಬಂಧಿಯವರು ನಮ್ಮ ಇಲಾಖೆಯ ಬುಲೆರೋ ಜೀಪ್ ನ ಸಂಖ್ಯೆ ಕೆಎ-44-0024 ಸಂಖ್ಯೆಯಲ್ಲಿ ಹೊರಟಿರುತ್ತೇವೆ. ಸದರಿ ವಾಹನದ ಸಂಖ್ಯೆಯನ್ನು ಮಹಜರ್ ನಲ್ಲಿ ನಮೂದಿಸಿರುವುದಿಲ್ಲ ಹಾಗೂ ಅದನ್ನು ಬರೆಯಲು ನಮಗೆ ಯಾವುದೇ ತೊಂದರೆ ಇಲ್ಲ ಎಂದು ಹೇಳುತ್ತಾರೆ. ನಮ್ಮ ಕಛೇರಿಯಿಂದ ನೇರವಾಗಿ ನಾವು ಬೋಚಿಹಳ್ಳಿ ಗೇಟ್ ಬಳಿ ಹೋಗಿರುತ್ತೇವೆ ಹಾಗೂ ಅಲ್ಲಿ ಸುಮಾರು 4-5 ವಾಹನಗಳನ್ನು ತಪಾಸಣೆ ಮಾಡಿರುತ್ತೇವೆ. ಆ ದಿನದಂದು ನಾನು ಎಷ್ಟು ವಾಹನಗಳನ್ನು ತಪಾಸಣೆ ಮಾಡಿರುತ್ತೇವೆ ಎಂಬುದು ನನಗೆ ನೆನಪಿಲ್ಲ ಸಾಕ್ಷಿಯು ಮುಂದುವರೆದು ಘಟನೆ ನಡೆದು ಸುಮಾರು 1 ವರ್ಷಗಳು ಆದ ಕಾರಣ ಮರೆತು ಹೋಗಿರುತ್ತೇನೆ ಎಂದು ಹೇಳುತ್ತಾರೆ. ನಾನು ಯಾವ ಯಾವ ಗಾಡಿಗಳನ್ನು ತಪಾಸಣೆ ಮಾಡಿರುತ್ತೇನೆ ಎಂಬುದು ಸಹ ನನಗೆ ನೆನಪಿಲ್ಲ. ಬೋಚಿಹಳ್ಳಿಯ ಗೇಟಿ ನ ಸುತ್ತ ಮುತ್ತ ವಾಸದ ಮನೆಗಳು ಇವೆ ಎಂದರೆ ಸಾಕ್ಷಿಯು ಸುಮಾರು 100 ರಿಂದ 200 ಮೀಟರ್ ದೂರದಲ್ಲಿ ಇರುವುದಾಗಿ ನುಡಿಯುತ್ತಾರೆ. ಅಂಗಡಿಗಳು ಘಟನಾ ಸ್ಥಳದ ಪಕ್ಕದಲ್ಲೇ ಇರುತ್ತವೆ. ಸದರಿ ರಸ್ತೆಯು ತಿಪಟೂರು-ಎಡೆಯೂರು ರಸ್ತೆಯಾಗಿರುವುದರಿಂದ ಅನೇಕ ವಾಹನಗಳು ಓಡಾಡುತ್ತವೆ ಎಂದರೆ ಸರಿ. ನಾವು ಬೋಚಿಹಳ್ಳಿ ಗೇಟಿನಿಂದ ಆರೋಪಿಯು ಬರುತ್ತಿರುವುದನ್ನು ಸುಮಾರು 20 ಮೀಟರ್ ದೂರದಿಂದ ನೋಡಿರುತ್ತೇವೆ. ಆರೋಪಿಯು ಆ ದಿನದಂದು ಯಾವ ಬಣ್ಣದ ಬಟ್ಟೆಯನ್ನು ಧರಿಸಿದ್ದರು ಎಂದು ನನಗೆ ಹೇಳಲಾಗುವುದಿಲ್ಲ. ಆರೋಪಿಯು ಟ್ಯಾಂಕರಿನ ಮೇಲೆ ಒಂದು ಬಿಳಿಯ ಬಣ್ಣದ ಚೀಲವನ್ನು ಇಟ್ಟುಕೊಂಡು ಬರುತ್ತಿದ್ದನು ಎಂದು ನುಡಿಯುತ್ತಾನೆ. ಮಹಜರ್ ನಲ್ಲಿ ಸದರಿ ಪ್ಲಾಸ್ಟಿಕ್ ಚೀಲದ ಬಣ್ಣವನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಅಲ್ಲಿ ಇದ್ದಂತಹ ಸಾರ್ವಜನಿಕರು ಯಾರೂ ನಮ್ಮನ್ನು ಗುರುತಿಸಿರುವುದಿಲ್ಲ ಎಂದರೆ ಸರಿ. ಮುದ್ದೆಮಾಲು 1 ರಲ್ಲಿರುವ ಟೆಟ್ರಾ ಪ್ಯಾಕೇಟ್ ಗಳ ಮೇಲೆ ಇರುವಂತಹ ಬ್ಯಾಚ್ ನಂಬರ್ ಮ್ಯಾನಿಫ್ಯಾಕ್ಚರ್ ಡೇಟ್ ಇತ್ಯಾದಿಗಳನ್ನು ನಮೂದು ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಟೆಟ್ರಾ ಪ್ಯಾಕೇಟ್ ಗಳು ಅಸ್ತವ್ಯಸ್ಥವಾಗಿದ್ದ ಕಾರಣ ಅದನ್ನು ಮಾಡಲು ಆಗಿರುವುದಿಲ್ಲ. ಈ ಹಂತದಲ್ಲಿ ಸಾಕ್ಷಿಗೆ ಮುದ್ದೆಮಾಲು 1 ರಲ್ಲಿರುವ ಟೆಟ್ರಾ

ಪ್ಯಾಕೇಟ್ ಗಳನ್ನು ತೋರಿಸಿ ಅವುಗಳು ಅಸ್ತವ್ಯಸ್ಥವಾಗಿರುವುದಿಲ್ಲ ಎಂದು ಹೇಳಿದಾಗ ಸಾಕ್ಷಿಯು ಅದು ಸ್ವಲ್ಪ ಹರಿದು ಹೋಗಿದ್ದವು ನಾವು ಸಂಖ್ಯೆಗಳನ್ನು ನಮೂದಿಸಲು ಕಷ್ಟವಾಗುತ್ತದೆ ಎಂದು ಹೇಳುತ್ತಾರೆ. ವಶಪಡಿಸಿಕೊಂಡಿರುವ ದ್ವಿಚಕ್ರ ವಾಹನವು ಯಾರಿಗೆ ಸೇರಿದ್ದು ಎಂದರೆ ಸಾಕ್ಷಿಯು ಅದು ಚಾಸಾ-4 ರವರಿಗೆ ತಿಳಿದಿರುತ್ತದೆ ಎಂದು ಹೇಳುತ್ತಾರೆ. ನಾವು ಯಾವುದೇ ವಶಪಡಿಸಿಕೊಂಡ ಮದ್ಯಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಎಫ್ ಎಸ್ ಎಲ್ ರಿಪೋರ್ಟನ್ನು ನೀಡಿದರವನ್ನು ಈ ಪ್ರಕರಣದಲ್ಲಿ ಸಾಕ್ಷಿಯಾಗಿ ಮಾಡಿರುವುದಿಲ ಎಂದರೆ ಸರಿ. ಆರೋಪಿಯ ಮೇಲೆ ನಾವು ಸುಳ್ಳು ದಾಖಲೆಗಳನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಮೇಲೆ ಹೇಳಿರುವ ಹಾಗೆ ಆರೋಪಿಯನ್ನು ಹಿಡಿದು ಅವರ ಬಳಿ ಇದ್ದಂತಹ ಚೀಲವನ್ನು ವಶಪಡಿಸಿಕೊಂಡಿರುತ್ತೇವೆ ಎಂಬುದು ಶುದ್ಧ ಸುಳ್ಳು ಎಂದರೆ ಸರಿಯಲ್ಲ. ಘಟನೆ ನಡೆದ ಸ್ಥಳದಲ್ಲಿ ಇದ್ದಂತಹ ಸಾರ್ವಜನಿಕರನ್ನು ಈ ಪ್ರಕರಣಕ್ಕೆ ಸಾಕ್ಷಿಯಾಗಿ ಬರುವಂತೆ ಕೋರಿದ್ದು ಅವರುಗಳು ನಿರಾಕರಿಸಿದ ಕಾರಣ ಅವರನ್ನು ಪಂಚರಾಗಿ ಮಾಡಲು ಸಾಧ್ಯವಾಗಿರುವುದಿಲ್ಲ. ದಿಃ **01-04-2023** ರಲ್ಲಿ ಚುನಾವಣಾ ನೀತಿ ಸಂಹಿತೆಯು ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಚುನಾವಣೆಯು ಮೇ ತಿಂಗಳ ಕೊನೆಯ ವಾರದಲ್ಲಿ ಆಗಿರುತ್ತದೆ ಎಂದರೆ ಸರಿ. ಮುದ್ದೆಮಾಲು **-1** ಆರೋಪಿಗೆ ಸೇರಿರುವುದಿಲ್ಲ ಹಾಗೂ ಅದನ್ನು ನಾವು ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರ್ ಮಾಡಿದಂತಹ ಸಮಯದಲ್ಲಿ ನಾವು ಯಾವುದೇ ಲ್ಯಾಪ್ ಟಾಪ್ ಮತ್ತು ಪ್ರಿಂಟರ್ ಗಳನ್ನು ತೆಗೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಲ್ಯಾಪ್ ಟಾಪ್ ಹಾಗೂ ಪ್ರಿಂಟರ್ ವಿದ್ಯುತ್‌ಯಿಂದಲೇ ಮಾತ್ರ ಚಾಲ್ತಿಯಾಗುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ಹೇಳುತ್ತಾರೆ ಆರೋಪಿಯು ಯಾವುದೇ ತಪ್ಪು ಮಾಡದಿದ್ದರೂ ಅವರ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಇಲಾಖೆಯ ಅಂಕಿ ಅಂಶಕ್ಕೋಸ್ಕರ ನಾವು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.